# ಪೀಠಿಕೆ

ದೇವರ ಸ್ವಭಾವವನ್ನು ಚರ್ಚಿಸುವದರಲ್ಲಿ ಎಚ್ಚರಿಕೆಯು ಅಗತ್ಯವಾಗಿದೆ. ಮೊದಲನೆಯದಾಗಿ "ಸ್ವಭಾವ" ಎಂಬ ಪದವನ್ನು ಎಲ್ಲಾ ನಿಸರ್ಗಕ್ಕೆ ಅತೀತವಾಗಿರುವವನಿಗೆ ಅನ್ವಯಿಸುವುದು ಯೋಗ್ಯವಾಗಿರುವದಿಲ್ಲ. ದೇವರ ಇಂದ್ರೀಯಾತೀತತೆಯು[1] ಪ್ರತಿಯೊಂದರಲ್ಲಿ ವಿಶೇಷವಾಗಿ ಪರಿಶುದ್ಧ ಬರಹಗಳಲ್ಲಿ ಹೇಳಲ್ಪಟ್ಟಿದೆ (ಉದಾಹರಣೆ, ಯೆಹೋಶುವ 2:11). ಆದುದರಿಂದ, ದೇವರು "ನೈಸರ್ಗಿಕ"ವಾದವನು ಅಲ್ಲವೇ ಅಲ್ಲ ಎಂದು ಹೇಳಬಹುದುಣಿ ಆತನು ನಿಸರ್ಗಕ್ಕಿಂತ ಅತೀತ. ಆತನು ದೈವಿಕವಾದಾತನು ಆಗಿದ್ದಾನೆ.

ಎರಡನೆಯದು, ಅಲೌಕಿಕನಾದ ದೇವರು (ಜಗತ್ತಿನ ಮೇಲೆ ಇರುವಾತನು) ವಿಶ್ವವ್ಯಾಪಿಯೂ (ಲೋಕದಲ್ಲಿರುವಾತನು) ಆಗಿರುವನೆಂಬುದನ್ನು ವಿವರಿಸಲಿಕ್ಕೆ ಜಾಗರೂಕತೆಯಿಂದ ಇರುವುದು ಅಗತ್ಯವಾಗಿದೆ. "ಇಲ್ಲಿ" ಹಾಗೂ "ಅಲ್ಲಿ" ಎರಡೂ ಕಡೆಗ ಳಲ್ಲಿ ಇರುವವನ ಬಗ್ಗೆ ಯೋಚಿಸುವುದು ಸಹ ಕಷ್ಟಕರವಾಗಿದ್ದರೂ ಈ ಸತ್ಯವು ಅಪೊಸ್ತಲರ ಕೃತ್ಯ 17:27ರಲ್ಲಿ ಪ್ರಕಟಿಸಲ್ಪಟ್ಟಿದೆ. ಬಹುಶ ಇದರಂಥ ವಿಚಾರವು ಹಲವಾರು ವರ್ಷಗಳ ಹಿಂದೆ, *Your God Is Too Small*[2] ಎಂಬ ಪುಸ್ತಕವನ್ನು ಬರೆಯಲು ಜೆ. ಬಿ. ಫಿಲಿಪ್ಸ್ ಅವರನ್ನು ಉತ್ತೇಜಿಸಿರಬೇಕು. ಸಹಾಯವಿಲ್ಲದೇ ದೇವರನ್ನು ಗ್ರಹಿಸಿಕೊಳ್ಳುವದಕ್ಕೆ ನಾವು ಸಾಕಷ್ಟು ದೊಡ್ಡವರಾಗಿರುತ್ತೇವೆ ಎಂದು ಯೋಚಿಸುವುದು ನಮಗೆ ಅಸಾಧ್ಯವಾದದ್ದಾಗಿದೆ. ಮಾನವರು ದೇವರ ಸ್ವಭಾವವನ್ನು ಗಂಭೀರವಾಗಿ ಧ್ಯಾನಿಸುವದಕ್ಕೆ ದೀನತೆಯ ಅವಶ್ಯಕತೆಯುಳ್ಳವರಾಗಿದ್ದಾರೆ. ನಮ್ಮ ಅತ್ಯುನ್ನತ ಗ್ರಹಿಕೆಗಳು ದೇವರ ಸ್ಥಿತಿಯನ್ನು ಆತನ ಮಹಿಮೆಯ ಪರಿಪೂರ್ಣತೆಯಲ್ಲಿ ಅರಿತು ಕೊಳ್ಳುವುದು ವಿರಳ (1 ತಿಮೊಥೆ 6:16ಣಿ 1 ಯೋಹಾನ 4:12).

ಮೂರನೆಯದು, ದೇವರನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಪ್ರಯತ್ನಿಸುವುದು ನಮ್ಮ ಜೀವನಗಳ ಅತೀ ದೊಡ್ಡ ಆಹ್ವಾನವಾಗಿದೆ. ದೇವರ ಬಗ್ಗೆ ಯೋಚಿಸುವ ಪ್ರತಿಯೊಬ್ಬ ವ್ಯಕ್ತಿಯು ಆತನನ್ನು ಮಿತಿಯುಳ್ಳ ಮಾರ್ಗಗಳಲ್ಲಿ ಯೋಚಿಸುತ್ತಾನೆ. ನಾವು ಒಬ್ಬಂಟಿಗರಾಗಿ ಹೋರಾಡುವದಾದರೆ, ನಾನು ಜಯಿಸಬಾರದ್ದರೊಂದಿಗೆ ಹೋರಾಡುತ್ತಿದ್ದೇವೆಂದು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳುತ್ತೇವೆ. ಪ್ರತಿಯೊಬ್ಬ ಬೈಬಲ್ ವಾಚಕನು ಅದು ಪರಿಶುದ್ಧ ಬರಹಗಳ ಒಪ್ಪಿಗೆಯಾಗಿದೆ ಎಂದು ತಿಳಿದಿದ್ದಾನೆ (ನೋಡಿರಿ ಯೆಶಾಯ 55:8, 9).

ಹಾಗಾದರೆ, ನಾವು ಏನು ಮಾಡಬೇಕು? ನಮ್ಮ ವೈಯಕ್ತಿಕ ಮಿತಿಗಳನ್ನು ಹಾಗೂ ಕೊರತೆಗಳನ್ನು ಅರಿಕೆ ಮಾಡುವಾಗ ನಾವು ದೀನತೆಗೆ ತರಲ್ಪಡುವೆವು. ನಮ್ಮ ಸ್ವಂತವಲ್ಲದ ಬೇರೆ ಮೂಲಗಳನ್ನು ನಾವು ಉಪಯೋಗಿಸುತ್ತೇವೆ ಹಾಗೂ ಆತನೊಂದಿಗೆ ವಾದಿಸಲಿಕ್ಕೆ ದೇವರ ಆಹ್ವಾನವನ್ನು ಕುತೂಹಲದಿಂದ ಸ್ವೀಕರಿಸುತ್ತೇವೆ (ಯೆಶಾಯ 1:18). ಈ ಪುಸ್ತಕದಲ್ಲಿ ದೇವರ ಸ್ವಭಾವವನ್ನೂ ಆತನು ನಮ್ಮೊಂದಿಗೆ ಹೇಗೆ ಸಂಬಂಧಿಸುವನು ಮತ್ತು ನಾವು ಆತನೊಂದಿಗೆ ಹೇಗೆ ಸಂಬಂಧಿಸುವೆವು ಎಂಬುದನ್ನು ಅಧ್ಯಯನ ಮಾಡುತ್ತೇವೆ. ನಮ್ಮ ಒಟ್ಟುಗೂಡಿದ ಪ್ರಯತ್ನಗಳು ರೋಮಾಂಚನಕರವಾದ ಅನುಭವಕ್ಕೆ ಯೋಗ್ಯವಾಗಿರುವುದು.

ಟಿಪ್ಪಣಿಗಳು

[1]ದೇವರು “ಇದ್ರಿಯಾತೀತನು” ಇಲ್ಲವೇ “ದಾಟಿಹೋಗುವಾತನು” ಎಂಬುದು ಸ್ವಭಾವಕ್ಕೆ ಮಿತಿಯುಳ್ಳದ್ದಾಗಿದೆ. [2]J. B. Phillips, *Your God Is Too Small* (New York: Macmillan Co., 1961).